ಗೊತ್ತಿರಲಿಲ್ಲ. ಅಷ್ಟೊತ್ತು ಶಿಸ್ತಿನಿಂದ, ಗಂಭೀರವಾಗಿ ತನ್ನಷ್ಟಕ್ಕೆ ಇದ್ದ ರಾಜೇಶನನ್ನು ನೋಡಿದ್ದ ರಿಸೆಪ್ಷನಿಸ್ಟ್‌ಗಳಿಗೆ ಈ ಸ್ತ್ರೀ ಯಾರು, ಆಕೆಯ ಜೊತೆ ಈತನ್ಯಾಕೆ ಜಗಳವಾಡುತ್ತಿದ್ದಾನೆಂದು ತಿಳಿಯಲಿಲ್ಲ.

ಅಷ್ಟರಲ್ಲಿ ವಿನುತಳ ವ್ಯಾಲೆಟ್ ಎಲ್ಲೋ ಹೋಗಿ ಬಿದ್ದಿತ್ತು. ರಾಜೇಶನ ಮೊಬೈಲ್ ನೆಲಕ್ಕಪ್ಪಳಿಸಿ ಚಿಂದಿಯಾಗಿತ್ತು. ಅವನ ಟೀ ಶರ್ಟ್‌ನ ಬಟನ್ ಕಿತ್ತು ಹೋಗಿದ್ದವು. ವಿನುತಳ ವಸ್ತ್ರ ಗಜಿಬಿಜಿಯಾಗಿತ್ತು. ಆಕೆ ದುರ್ಗೆಯಂತೆ ರೌದ್ರಾವತಾರ ತಾಳಿದ್ದಳು. ರಾಜೇಶನಂತೂ ಉಕ್ಕೇರಿದ ಕೋಪದಿಂದ ಕಂಪಿಸುತ್ತಿದ್ದನು. ಇಬ್ಬರು ಆಜನ್ಮ ವೈರಿಗಳಂತೆ ಕಾದಾಡುತ್ತಿದ್ದರು, ಪರಸ್ಪರ ಶಪಿಸುತ್ತಿದ್ದರು. ಇಬ್ಬರೂ ಮಾನಸಿಕ ನಿಯಂತ್ರಣ ಕಳೆದುಕೊಂಡವರಂತೆ ವರ್ತಿಸುತ್ತಿದ್ದರು.

ಸೆಕ್ಯುರಿಟಿಯವರು ಬಂದು ಇಬ್ಬರನ್ನು ಹಿಡಿದು ಹತೋಟಿಗೆ ತಂದರು. ಮ್ಯಾನೇಜರ್ ಓಡಿಕೊಂಡೇ ಬಂದಿದ್ದರು. ಗಲಾಟೆ ಕೇಳಿ ಅಲ್ಲಿ ಸಂಚರಿಸುತ್ತಿದ್ದವರು, ರೆಸ್ಟೋರೆಂಟಿನಲ್ಲಿದ್ದವರೆಲ್ಲಾ ನೋಡಲು ನೆರೆದಿದ್ದರು. ವಿನುತಳನ್ನು ಲೇಡೀಸ್ ರೂಮಿಗೆ ಕೊಂಡೊಯ್ಯಲಾಯಿತು. ರಾಜೇಶನನ್ನು ಮ್ಯಾನೇಜರ್ ತನ್ನ ಕಚೇರಿಗೆ ಎಳೆದುಕೊಂಡು ಹೋದರು. ಇಬ್ಬರನ್ನೂ ವಿಚಾರಣೆ ನಡೆಸಿದಾಗ ತಿಳಿದು ಬಂದ ಸಂಗತಿ ಎಲ್ಲರನ್ನೂ ಚಕಿತಗೊಳಿಸಿತು. ಹೀಗೂ ನಡೆಯುತ್ತದೆಯೇ ಎಂದು ಆಶ್ಚರ್ಯಪಟ್ಟರು. ಅಷ್ಟರಲ್ಲಿ ಮಾಹಿತಿ ಪಡೆದ ಪೊಲೀಸರು ಅಲ್ಲಿಗೆ ಆಗಮಿಸಿಯಾಗಿತ್ತು.

* * *

ಪ್ರಕಾಶ್ ಮತ್ತು ಸವಿತಾಳ ಮದುವೆ ಬಹಳ ಅದ್ಧೂರಿಯಾಗಿ ನಡೆದಿತ್ತು. ಇಬ್ಬರೂ ಒಳ್ಳೆಯ ಉದ್ಯೋಗದಲ್ಲಿದ್ದರು. ನೋಡಲು ಅವರದು ಸೊಗಸಾದ ಜೋಡಿ. ವಿವಾಹದ ಮೊದಲ ತಿಂಗಳುಗಳನ್ನು ಸುಖ ಸಂತೋಷದಲ್ಲಿ ಕಳೆದರು. ಕಾಲ ಕಳೆದಂತೆ ಇಬ್ಬರಿಗೂ ಆಕರ್ಷಣೆ ಕಡಿಮೆಯಾಯಿತು. ಮೊದಲು ಒಂದು ಕ್ಷಣವೂ ಅಗಲಲಾಗದವರು ಕ್ರಮೇಣ ಹತ್ತಿರ ಬರಲು ಬೇಸರಿಸುತ್ತಿದ್ದರು. ದೈಹಿಕ ಆಕರ್ಷಣೆ ಹೊರತುಪಡಿಸಿ ಅವರಿಬ್ಬರಲ್ಲೂ ಆತ್ಮೀಯತೆ, ಒಡನಾಟವಿರಲಿಲ್ಲ.

ಬಾಲ್ಯದಿಂದಲೂ ಸುಖದ ಸುಪ್ಪತ್ತಿಗೆಯಲ್ಲಿಯೇ ಅವರು ಬೆಳೆದಿದ್ದರು. ಅನುಕೂಲಕರ ಕುಟುಂಬದಲ್ಲಿ ಹುಟ್ಟಿ ಬೆಳೆದವರಿಗೆ ಯಾವುದರ ಕೊರತೆಯೂ ಬಾಧಿಸಿರಲಿಲ್ಲ. ತನಗೆ ಬೇಕಾದಂತೆ ಜೀವಿಸುವ ಸ್ವಾತಂತ್ರ್ಯ, ಶ್ರೀಮಂತಿಕೆ ಅವರಿಗಿತ್ತು. ಹಾಗಾಗಿ ಹೊಂದಾಣಿಕೆ ಮನೋಭಾವ, ಇನ್ನೊಬ್ಬರ ಇಚ್ಛೆಯಂತೆ ನಡೆದುಕೊಳ್ಳುವ ಸ್ವಭಾವದ ಪರಿಚಯವೇ ಅವರಿಗಿರಲಿಲ್ಲ. ಶ್ರೀಮಂತಿಕೆ ಮತ್ತು ಉನ್ನತ ಶಿಕ್ಷಣದ ಅತಿ ಸ್ವಾಭಿಮಾನ, ಸ್ಟೇಟಸ್‌ನ ಮದ ಅವರಲ್ಲಿ ಅಚ್ಚೊತ್ತಿಕೊಂಡಿತ್ತು. ಇವೆಲ್ಲವೂ ಅವರಿಗೆ ವಿವಾಹ ಬಂಧನದಲ್ಲಿ ಬದುಕಲು ಅಡ್ಡಿಯಾಗಿದ್ದವು. ಏಜೆಂಟರೊಬ್ಬರಿಂದ ಪ್ರೊಫೈಲ್ ಹೊಂದಿಸಿಕೊಂಡು ಮದುವೆಯಾಗಿದ್ದ ಅವರಲ್ಲಿ ಬದುಕಲು ಬೇಕಾದ ಹೊಂದಾಣಿಕೆ ಇರಲಿಲ್ಲ.

ಸವಿತಾಳಿಗೆ ಬೇಗ ತಾಯಿಯಾಗಲು ಇಷ್ಟವಿರಲಿಲ್ಲ. ಇಬ್ಬರ ಆಸಕ್ತಿಗಳು, ಹವ್ಯಾಸಗಳೂ ತಾಳೆಯಾಗುತ್ತಿರಲಿಲ್ಲ. ಹೀಗಾಗಿ ಅವರ ಸಂಬಂಧ ಬಹು ಬೇಗನೆ ಹಳಸಿತು. ಪ್ರೀತಿ ಬೆಳೆಯಲು ಆಸ್ಪದವೇ ಇರಲಿಲ್ಲ. ದಿನಾಲೂ ಅತೃಪ್ತಿ, ಅಸಮಾಧಾನ ಬೆಳೆದು ಅಪನಂಬಿಕೆ, ಅಗೌರವ ಹೆಚ್ಚಿತು. ಪ್ರತಿಯೊಂದಕ್ಕೂ ವಾದ, ದೂರುವಿಕೆ, ಸಂಘರ್ಷ ನಡೆಯುತ್ತಾ ಘರ್ಷಣೆ, ಜಗಳ ಸಾಮಾನ್ಯವಾಯಿತು. ರಾಜಿಯಾಗಲು ಇಬ್ಬರೂ ತಯಾರಿರಲಿಲ್ಲ.

ಇದರಿಂದಾಗಿ ಅವರ ನಡುವೆ ದ್ವೇಷ, ಹಗೆತನ ಬೆಳೆಯಿತು. ಕುಟುಂಬದವರಿಂದ ಅವರ ನಡುವೆ ಉತ್ತಮ ಬಾಂಧವ್ಯ ಮೂಡಿಸಲು ಪ್ರಯತ್ನಗಳಾದರೂ ಇವರ ಹಟ, ಅಸಹಕಾರದಿಂದಾಗಿ ಅದೆಲ್ಲಾ ವ್ಯರ್ಥವಾಯಿತು. ಸ್ವೇಚ್ಛೆಯಿಂದ ಜೀವನ ನಡೆಸುತ್ತಿದ್ದವರಿಗೆ ಪ್ರತಿಯೊಂದರಲ್ಲಿಯೂ ರಾಜಿಯಾಗುವುದು, ಹೊಂದಿಕೊಂಡು ಹೋಗುವುದು ಆಗದ ಮಾತಾಯಿತು. ಅನ್ಯೋನ್ಯತೆಯಿಂದಿರಬೇಕಾದವರು ಒಬ್ಬರನ್ನೊಬ್ಬರು ಕಂಡರಾಗದ ಹಂತಕ್ಕೆ ಹೋಗಿದ್ದರು. ಮುಖ ನೋಡಿದರೇ ಸಿಡುಕುವ, ಹೊಡೆದಾಡುವ ಪರಿಸ್ಥಿತಿಗೆ ಹೋದ ನಂತರ, ಅವರಲ್ಲಿ ಉತ್ತಮ ಬಾಂಧವ್ಯ ಕೂಡಿ ಬರುವುದು ಅಸಾಧ್ಯವಾಯಿತು. ಒಗ್ಗಿಕೊಳ್ಳದ ಮನಸ್ಸುಗಳು ಪರಸ್ಪರರಿಂದ ದೂರ ಸರಿದವು.

ಮದುವೆಯಾಗಿ ವರುಷವಾಗುವ ಮೊದಲೇ ಅವರಿಬ್ಬರೂ ಬೇರೆಯಾಗಿದ್ದರು. ವಿವಾಹದ ಬಂಧನದಿಂದ ಅವರು ಮುಕ್ತಿ ಪಡೆದುಕೊಂಡಿದ್ದರು. ಮಹಾನಗರದಲ್ಲಿ ಒಳ್ಳೆಯ ಉದ್ಯೋಗವಿದ್ದಿದ್ದರಿಂದ ಮುಕ್ತವಾಗಿ ಬದುಕಲು ಅವರಿಗೆ ಸಾಧ್ಯವಾಗಿತ್ತು.

ಮಿತ್ರರೊಂದಿಗೆ ಅಪರೂಪಕ್ಕೊಮ್ಮೆ ಬಾರ್‌ಗೆ ಭೇಟಿ ನೀಡುತ್ತಿದ್ದ ಪ್ರಕಾಶನೀಗ ದಿನಾಲೂ ಕುಡಿಯಲು ಆರಂಭಿಸಿದ್ದ. ದಿಕ್ಕು ತಪ್ಪಿದ ಜೀವನದ ಬೇಸರ ಕಳೆಯಲು, ನಿರಾಶೆ ಮರೆಯಲು ಆಯ್ದುಕೊಂಡ ಕುಡಿತ ಆತನನ್ನೇ ದಾಸನನ್ನಾಗಿಸಿತ್ತು. ಸವಿತಾಳಿಗೆ ಕಚೇರಿಯೇ ಬದುಕಾಗಿತ್ತು.

ಕಾಲ ಸರಿದಂತೆ ಫೇಸ್‌ಬುಕ್‌ನ ಆಗಮನವಾಯಿತು. ಎಂಜಿನಿಯರ್ ಆಗಿದ್ದ ಪ್ರಕಾಶನಿಗೆ ಇಂಟರ್‌ನೆಟ್‌ನ ಪರಿಚಯವಿತ್ತು. ಆದರೆ ತನ್ನ ಬದುಕು ಮೂರಾಬಟ್ಟೆಯಾಗಿರುವಾಗ ಫೇಸ್‌ಬುಕ್‌ನಲ್ಲಿ ಹೇಗೆ ಮುಖ ತೋರಿಸಲಿ ಎಂಬ ಜಿಗುಪ್ಸೆ ಅವನಿಗಾವರಿಸಿತ್ತು. ಹೀಗಾಗಿ ಸಮಯ ಕಳೆಯಲೆಂದು ಬೇರೆ ಹೆಸರಿನಲ್ಲಿ ಆತ ಫೇಸ್‌ಬುಕ್ ಪ್ರೊಫೈಲ್ ತೆರೆದ. ಪ್ರಕಾಶ್ ಹೆಸರಿನ ಬದಲಿಗೆ ರಾಜೇಶ್ ಎಂಬ ಅಕೌಂಟ್ ತೆರೆದ. ಗೂಗಲ್‌ನಲ್ಲಿ ದೊರೆತ ಯಾವುದೋ ರಾಜ್ಯದ ಕ್ರೀಡಾಳುವಿನ ಚಂದದ ಭಾವಚಿತ್ರವನ್ನು ತನ್ನ ಪ್ರೊಫೈಲ್‌ಗೆ ಲಗತ್ತಿಸಿದ.

ಸುರುವಿಗೆ ತಮಾಷೆಯೆನಿಸಿತು. ಕ್ರಮೇಣ ಅದೇ ಅಕೌಂಟಿನಲ್ಲಿ ವ್ಯವಹರಿಸಿದ. ಒಂದು ದಿನ ಅವನಿಗೆ ವಿನುತಳ ಪರಿಚಯವಾಯಿತು. ಅತ್ಯಂತ ಸುಂದರಳಾಗಿದ್ದ ಅವಳ ಫೋಟೊ ನೋಡಿಯೇ ಫ್ರೆಂಡ್ ರಿಕ್ವೆಸ್ಟ್ ಕಳಿಸಿದ್ದ. ಅದನ್ನು ಸ್ವೀಕರಿಸಿದ್ದ ಆಕೆಯೂ ಅವನಿಗೆ ಪ್ರತಿಕ್ರಿಯಿಸುತ್ತಿದ್ದಳು. ಪ್ರತಿದಿನ ಚಾಟಿಂಗ್ ನಡೆಸುತ್ತಾ ಅವರಲ್ಲಿ ಗೆಳೆತನ ಮೂಡಿತು. ದಿನಾಲೂ ಇಬ್ಬರೂ ಆತ್ಮೀಯತೆಯಿಂದ ಚಾಟಿಂಗ್ ನಡೆಸುತ್ತಾ ಜಗತ್ತನ್ನು ಮರೆಯುತ್ತಿದ್ದರು.

ಪ್ರಕಾಶನಿಗೆ ತಾನು ರಾಜೇಶ್ ಅಲ್ಲವೆಂಬ ಅಳುಕು ಕೆಲವೊಮ್ಮೆ ಕಾಡಿದರೂ, ಈ ಹೊಸ ಹೆಸರು ತನಗೆ ಹೊಸ ಜೀವನವನ್ನು ನೀಡುತ್ತಿದೆಯೆಂದೆನಿಸಿ ತಾನಿನ್ನು ರಾಜೇಶ್ ಆಗಿರುವುದೇ ಒಳಿತೆನಿಸಿತು. ಪ್ರತಿ ದಿನದ ಚಾಟಿಂಗ್ ಮುಖಾಂತರವೇ ಅವರಿಬ್ಬರೂ ಹತ್ತಿರವಾದರು, ಒಬ್ಬರನ್ನೊಬ್ಬರು ಬಿಟ್ಟಿರಲಾರದವರಂಥಾದರು. ಕೊನೆಗೆ ಪ್ರೇಮಿಸಲಾರಂಭಿಸಿದರು.

ಸ್ಮಾರ್ಟ್ ಫೋನ್‌ಗಳ ಯುಗ ಆರಂಭವಾದ ಮೇಲೆ ಮೊಬೈಲಿನಲ್ಲಿಯೂ ಚಾಟಿಂಗ್ ಮುಂದುವರಿಯಿತು. ಊಟ ಮಾಡುವಾಗ, ಪ್ರಯಾಣದಲ್ಲಿರುವಾಗ ಮತ್ತು ಮಲಗಿರುವಲ್ಲಿಯೂ ಚಾಟಿಂಗ್ ಮಾಡಲು ಸಾಧ್ಯವಾಗಿತ್ತು. ಇಬ್ಬರಿಗೂ ಚಾಟಿಂಗ್ ಮಾಡದೆ ಸಮಯವೇ ಕಳೆಯುತ್ತಿರಲಿಲ್ಲ.

ವಿನುತಳಿಗೂ ಇಂತಹ ಸಾಂಗತ್ಯ ಸುಖಕರವಾಗಿತ್ತು. ರಾಜೇಶನಂತೂ ಆಕೆಗೆ ತುಂಬಾ ಸಂತೋಷ ಕೊಡುತ್ತಿದ್ದ. ಪ್ರೀತಿ ಕೊಡುತ್ತಿದ್ದ, ಸಮಾಧಾನ ನೀಡುತ್ತಿದ್ದ. ದಿನ ಕಳೆದಂತೆ ಅವರಿಬ್ಬರಿಗೂ ತಾವು ಒಬ್ಬರನ್ನೊಬ್ಬರು ಬಿಟ್ಟಿರಲಾರೆವು, ತಮ್ಮದು ಜನುಮದ ಜೋಡಿಯೆಂಬ ಭಾವನೆ ಮೂಡುತ್ತಿತ್ತು. ಬಹುಶಃ ದೇವರೇ ತಮ್ಮನ್ನು ಒಂದು ಮಾಡುತ್ತಿದ್ದಾನೆಂಬ ನಂಬಿಕೆ ಅವರಿಗೆ ಬಂದಿತ್ತು. ಹೀಗೆ ಅವರಿಬ್ಬರೂ ಭೇಟಿಯಾಗುವ ದಿನ ಕೂಡಿ ಬಂದಿತ್ತು. ಒಪ್ಪಿಕೊಂಡ ದಿನದಂದು ಮುಖಾಮುಖಿಯಾಗಲು ಅವರು ಹೋಟೆಲ್ ನ್ಯೂ ವೈಸರಾಯ್‌ಗೆ ಆಗಮಿಸಿದ್ದರು.

ಅಲ್ಲಿಗೆ ತಲುಪಿ, ಒಬ್ಬರನ್ನೊಬ್ಬರು ಸಂಧಿಸಿದಾಗಲೇ ಅವರಿಬ್ಬರಿಗೂ ತಾವು ಮೋಸ ಹೋಗಿದ್ದು ಗೊತ್ತಾಗಿದ್ದು. ಅಲ್ಲಿ ಹಿಂದೆ ಜಗಳವಾಡಿ ಬೇರೆಯಾಗಿದ್ದ ಗಂಡ ಹೆಂಡತಿಯರ ಮುಖಾಮುಖಿಯಾಗಿತ್ತು!

ಸವಿತಾಳಿಗೂ ದಾರಿ ತಪ್ಪಿದ ತನ್ನ ಜೀವನದಿಂದ ಮುಕ್ತಿ ಬೇಕಾಗಿತ್ತು. ದೂರದ ನಾಡಿನ ನಟಿಯೊಬ್ಬಳ ಸುಂದರ ಭಾವಚಿತ್ರವನ್ನು ಬಳಸಿ ವಿನುತ ಎಂಬ ಹೆಸರಿನಲ್ಲಿ ಫೇಸ್‌ಬುಕ್ ಪ್ರೊಫೈಲ್ ಆರಂಭಿಸಿದ್ದಳು.

ವಿನುತಳಾಗಿ ಬದಲಾಗಿದ್ದ ಸವಿತಾಳಿಗೆ ತಾನು ರಾಜೇಶನ ಜೊತೆಯಲ್ಲದೇ ಪ್ರಕಾಶನ ಜೊತೆ ಮತ್ತು ರಾಜೇಶ್ ಆಗಿ ಪರಿವರ್ತನೆ ಹೊಂದಿದ್ದ ಪ್ರಕಾಶನಿಗೆ ತಾನು ವಿನುತಳೊಂದಿಗೆ ಅಲ್ಲದೆ ಸವಿತಾಳ ಜೊತೆಗೆ ಸಂಬಂಧ ಸ್ಥಾಪಿಸಿದ್ದೇವೆಂಬ ಅರಿವಾಗಿದ್ದು ಅವರಿಬ್ಬರೂ ಹೋಟೆಲಿನಲ್ಲಿ ಎದುರಾದಾಗಲೇ!

ಫೇಸ್‌ಬುಕ್ ನ ನಕಲಿ ಜೀವನ ನಿಜ ಬದುಕಿಗೆ ಆಘಾತವನ್ನಿಕ್ಕಿತ್ತು. ವಾಸ್ತವವಲ್ಲದ ಪ್ರೀತಿಯು ಬೆಂದ ಹೃದಯಗಳನ್ನು ತಾತ್ಕಾಲಿಕವಾಗಿ ಶಮನಗೊಳಿಸಿತ್ತಾದರೂ, ಸುಳ್ಳು ಪ್ರೀತಿಯ ಸುನಾಮಿಯಲ್ಲಿ ಕೊಚ್ಚಿ ಹೋದ ಅವರ ಪ್ರೇಮಸೌಧ ಧರಾಶಾಯಿಯಾಗಿತ್ತು.

(ಫೇಸ್‌ಬುಕ್ ಜಗತ್ತನ್ನು ತೆರೆದು ತೋರಿಸುವ, ನೈಜ ಘಟನೆಯಾಧಾರಿತ ಕಥೆ)